**ಓ ಎಸ್ ನಂಃ 64-15**
**ಪಿ ಡಬ್ಲ್ಯೂ ಃ 1**

**ದಿಃ 29-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಜೆ ಎಸ್ ಡಿ ವಕೀಲರಿಂದ**

39. ನನ್ನ ಗಂಡನ ತಂದೆಯ ಹೆಸರು ಕರೇಹನುಮಯ್ಯ ಆಗಿರುತ್ತದೆ. ಕರೆಹನುಮಯ್ಯರವರಿಗೆ 6 ಜನ ಮಕ್ಕಳು ಎಂದರೆ ನಿಜ. ಅದರಲ್ಲಿ ಈಗ ಮೂರು ಜನ ಜೀವಂತವಿದ್ದು, ಮೂರು ಜನ ಮಕ್ಕಳು ತೀರಿಕೊಂಡಿರುತ್ತಾರೆ. ಗಂಗಹನುಮಕ್ಕರವರು ಈ ದಾವೆಯನ್ನು ಹೂಡುವಾಗ ಬದುಕಿರಲಿಲ್ಲ. ಗಂಗಹನುಮಕ್ಕರವರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಗಂಗಹನುಮಕ್ಕರವರಿಗೆ ಮಕ್ಕಳು ಇರಲಿಲ್ಲ. ಚಿಕ್ಕಹನುಮಕ್ಕ, ಜಯಮ್ಮರವರು ಜೀವಂತವಿರುತ್ತಾರೆ. ಶಾರದಮ್ಮರವರು ತೀರಿಕೊಂಡಿರುತ್ತಾರೆ. ಶಾರದಮ್ಮರವರಿಗೆ ಮಕ್ಕಳು ಇರುವುದಿಲ್ಲ. ದಾವಾ ಆಸ್ತಿ ನನ್ನ ಮಾವನಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ನಿಜ. ಈ ದಾವೆಯಲ್ಲಿ ಚಿಕ್ಕಹನುಮಕ್ಕ ಮತ್ತು ಜಯಮ್ಮರವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರುವುದಿಲ್ಲ.

40. ಸರ್ವೆ ನಂ 51 ಪೋಡಿಯಾಗಿ ಸರ್ವೆ ನಂ 51/1 ಮತ್ತು ಸರ್ವೆ ನಂ 51/2 ಎಂದು ಆಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂ 51 ಪೋಡಿಯಾಗಿ ಸರ್ವೆ ನಂ 51 ಎ ರಿಂದ 51 ಎಫ್ ವರೆಗೆ ಆಗಿರುತ್ತದೆ ಎಂದರೆ ನಾವು ಸಹೋದರರು ಭಾಗ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ಹೂಡುವಾಗ ನಾನು ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಎಂದರೆ ನಿಜ. ಆ ಪಹಣಿಗಳನ್ನು ನಾನೇ ಪಡೆದಿರುತ್ತೇನೆ. ಮೊದಲಿಗೆ ನನ್ನ ಮಾವನ ಹೆಸರಿನಲ್ಲಿದ್ದ 10 ಎಕರೆ ಜಮೀನಿಗೆ ಸಂಬಂದಿಸಿದಂತೆ ಪಹಣಿಗಳು ಬೇರೆ ಬೇರೆಯಾಗಿ ಬರುತ್ತಿದ್ದವು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ 5 ನ್ನು ತೋರಿಸಲಾಗಿ ಅದರಲ್ಲಿ ತೋರಿಸಿರುವ ಉಮೇಶ್ ಎಂಬುವವರು ಈ ದಾವೆಯ 8 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 5 ರಲ್ಲಿ ತೋರಿಸಿರುವ ಶಾರದಮ್ಮರವರು ಈ ದಾವೆಯ 7 ನೇ ಪ್ರತಿವಾದಿ ಎಂದರೆ ಸರಿಯಲ್ಲ. ನಾನು ಪಹಣಿಗಳನ್ನು ಹಾಜರುಪಡಿಸುವಾಗ ಅವುಗಳನ್ನು ಓದಿದ್ದೀರಾ ಅಥವಾ ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ. 8 ನೇ ಪ್ರತಿವಾದಿಯ ಹೆಸರು ಕ್ರಯಪತ್ರದ ಆಧಾರದ ಮೇರೆಗೆ ಪಹಣಿ ಮತ್ತು ಇತರೆ ಕಂದಾಯ ದಾಖಲೆಗಳಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಸರ್ವೆ ನಂ 51/1 1962 ರಲ್ಲಿ ಪೋಡಿಯಾಗಿದ್ದು ಆ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸರ್ವೆ ನಂ 51 ರಲ್ಲಿ ಯಾರು ಯಾರು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಅವರ ಹೆಸರುಗಳು ಪಹಣಿಯಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ.

41. ಕರೆಹನುಮಯ್ಯರವರು ತಮ್ಮ ಹೆಸರಿನಲ್ಲಿದ್ದ 10 ಎಕರೆ 06 ಗುಂಟೆ ಜಮೀನಿನ ಪೈಕಿ 7 ಎಕರೆ 27 ಗುಂಟೆ ಜಮೀನನ್ನು ನನ್ನ ಗಂಡ ಮತ್ತು 1ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ ವ್ಯವಸ್ಥಾಪನಾ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. ಆ ವ್ಯವಸ್ಥಾಪನಾ ಪತ್ರದಲ್ಲಿ ನನ್ನ ಗಂಡನಿಗೆ ಅರ್ಧ ಭಾಗ ಮತ್ತು 1ನೇ ಪ್ರತಿವಾದಿಗೆ ಅರ್ಧ ಭಾಗ ಎಂದು ಬರೆಯಲಾಗಿದೆ ಎಂದರೆ ಭಾಗ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ಮಾವ ವ್ಯವಸ್ಥಾಪನಾ ಪತ್ರ ಬರೆದುಕೊಡುವಾಗ ನನ್ನ ಗಂಡ ಮತ್ತು 1ನೇ ಪ್ರತಿವಾದಿ ಅಲ್ಪಾವಯಿಗಳು ಆಗಿದ್ದರು ಎಂದರೆ ನಿಜ. ನನ್ನ ಅತ್ತೆಯ ಹೆಸರು ರಂಗಮ್ಮ ಎಂದರೆ ನಿಜ. ನನ್ನ ಅತ್ತೆ ರಂಗಮ್ಮರವರು 7 ಎಕರೆ 27 ಗುಂಟೆ ಜಮೀನಿನಲ್ಲಿ 1 ಎಕರೆ ಜಮೀನನ್ನು ದಿನಾಂಕಃ 22-07-1960 ರಲ್ಲಿ ಗಂಗಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ರಂಗಮ್ಮರವರ ಹೆಸರಿಗೆ ಜಮೀನು ಇರಲಿಲ್ಲ ಎಂದು ಹೇಳುತ್ತಾರೆ. ಗಂಗಪ್ಪರವರು ತಾವು ಖರೀದಿ ಮಾಡಿದ 1 ಎಕರೆ ಜಮೀನನ್ನು 6ನೇ ಪ್ರತಿವಾದಿಗೆ ದಿನಾಂಕಃ 06-12-1962 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಬದುಕಿದ್ದಾಗ 2 ಎಕರೆ ಜಮೀನನ್ನು ಈ ದಾವೆಯ 6ನೇ ಪ್ರತಿವಾದಿಗೆ ದಿನಾಂಕಃ 06-01-1967 ರಂದು ಖರೀದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ 1ನೇ ಪ್ರತಿವಾದಿ ದಾವಾ ಸರ್ವೆ ನಂಬರಿನಲ್ಲಿ 1 ಎಕರೆ ಜಮೀನನ್ನು 6ನೇ ಪ್ರತಿವಾದಿಯ ಹೆಸರಿಗೆ ದಿನಾಂಕಃ 17-11-1977 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿ 3 ಎಕರೆ 20 ಗುಂಟೆ ಜಮೀನನ್ನು ಮರಿಯಪ್ಪ ಹಾಗೂ ಮರಿಗಂಗಮ್ಮರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮರಿಯಪ್ಪ ಹಾಗೂ ಮರಿಗಂಗಮ್ಮರವರು 3 ಎಕರೆ 20 ಗುಂಟೆ ಜಮೀನನ್ನು 7ನೇ ಪ್ರತಿವಾದಿಯ ಹೆಸರಿಗೆ ದಿನಾಂಕಃ 24-12-1981 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 3 ಎಕರೆ 20 ಗುಂಟೆ ಜಮೀನಿನ ಸರ್ವೆ ನಂ 51/1 ಇ ಆಗಿರುತ್ತದೆ ಎಂದರೆ ಸರಿಯಲ್ಲ. 7ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರದ ಆಧಾರದ ಮೇರೆಗೆ ಎಂ ಆರ್ ನಂ 10/1984-85 ರಂತೆ ಪಹಣಿ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. 7ನೇ ಪ್ರತಿವಾದಿ 3 ಎಕರೆ 20 ಗುಂಟೆ ಜಮೀನಿನಲ್ಲಿ 2 ಎಕರೆ 37 ಗುಂಟೆ ಜಮೀನನ್ನು 8ನೇ ಪ್ರತಿವಾದಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಕ್ರಯಪತ್ರದ ಆಧಾರದ ಮೇರೆಗೆ 8ನೇ ಪ್ರತಿವದಿಾಯ ಹೆಸರು ಎಂ ಆರ್ ನಂ 49/2006-07 ರಂತೆ ಪಹಣಿಯಲ್ಲಿ ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ 2 ಎಕರೆ 27 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ ಅದು ದಾವಾ ಆಸ್ತಿಗೆ ಸಂಬಂದಿಸಿದ ಫೋಟೋವನ್ನು ನಿಡಿ 1 ಎಂದು ಗುರುತಿಸಲಾಯಿತು. 8ನೇ ಪ್ರತಿವಾದಿ ತಾವು ಖರೀದಿ ಮಾಡಿದ 2 ಎಕರೆ 37 ಗುಂಟೆ ಜಮೀನಿನಲ್ಲಿ ಅಭಿವೃದ್ಧಿ ಅಧಿಕಾರಿಗಳಿಂದ ಪರವಾನಿಗೆ ಪಡೆದು ಲೇಔಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ದಿನಾಂಕಃ 05-07-2008 ರಂದು ತಾವು ಮಾಡಿದ

ಲೇಔಟ್ ಗೆ ಬಿ ಎಂ ಆರ್ ಡಿ ಯಿಂದ ಅನುಮತಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ತಾವು ಮಾಡಿದ ಲೇಔಟ್ ನಲ್ಲಿ ಉದ್ಯಾನವನಕ್ಕೆ ಮತ್ತು ಸಿವಿಕ್ ಅಮಿನಿಟೀಸ್ ಮತ್ತು ರಸ್ತೆಗೆ ಜಮೀನನ್ನು ಸರ್ಕಾರದ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯಲ್ಲಿ ಒಟ್ಟು 37 ನಿವೇಶನಗಳು ಆಗಿರುತ್ತವೆ ಎಂದರೆ ಸರಿಯಲ್ಲ. 37 ನಿವೇಶಗಳಲ್ಲಿ 22 ನಿವೇಶನಗಳನ್ನು ಬೇರೆ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮಾರಾಟ ಮಾಡಲು ಅವರು ಯಾರು ಕೊಟ್ಟರು ಎಂದು ಹೇಳುತ್ತಾರೆ. ಸರ್ವೆ ನಂ 51/1 ಇ ರಲ್ಲಿ ಈಗ ಲೇಔಟ್ ಆಗಿರುವುದಿಲ್ಲ. ಆ ಲೇಔಟ್ ನಲ್ಲಿ ನಿವೇಶನ ಖರೀದಿ ಮಾಡಿದ ಖರೀದಿದಾರರು ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆನಂ 51/1 ಇ ರಲ್ಲಿ ಲೇಔಟ್ ಆಗಿರುವ ವಿಷಯ ನನಗೆ ಗೊತ್ತಿದ್ದು ನಿವೇಶನಗಳನ್ನು ಖರೀದಿ ಮಾಡಿದ ವಿಷಯ ಗೊತ್ತಿರುತ್ತದೆ, ಆದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

42. 8ನೇ ಪ್ರತಿವಾದಿಯ ಪ್ರತಿವಾದ ಪತ್ರದ ವಿಷಯವನ್ನು ನಾನು ತಿಳಿದುಕೊಂಡಿಲ್ಲ. 8ನೇ ಪ್ರತಿವಾದಿಯ ಪ್ರತಿವಾದ ಪತ್ರದ ವಿಷಯವನ್ನು ನಾನು ಬೇರೆಯವರ ಕಡೆಯಿಂದ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. 8ನೇ ಪ್ರತಿವಾದಿಗೆ ನಾನು ತೊಂದರೆ ಕೊಟ್ಟಿದ್ದರಿಂದ ಅವರು ಕುದೂರು ಪೋಲಿಸ್ ಠಾಣೆಯಲ್ಲಿ ನನ್ನ ವಿರುದ್ದ ದೂರನ್ನು ಕೊಟ್ಟಿರುತ್ತಾರೆ ಎಂದರೆ ನಿಜ. ಈ ದಾವೆಯನ್ನು ಹೂಡುವ ಮೊದಲೇ ಸರ್ವೆ ನಂ 51/1 ಇ ರಲ್ಲಿ ಲೇಔಟ್ ಆಗಿರುವ ವಿಷಯ ಮತ್ತು ಆಸ್ತಿಗಳನ್ನು ಖರೀದಿ ಮಾಡಿದ ವಿಷಯ ಗೊತ್ತಿದ್ದರೂ ಸಹ ಅದನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ.

43. ನಾನು, ನನ್ನ ಗಂಡ ಮತ್ತು 1ನೇ ಪ್ರತಿವಾದಿ ಸೇರಿ ಎ ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಅದೆಲ್ಲಾ ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ಇದೇ ನ್ಯಾಯಾಲಯದಲ್ಲಿ ನಾನು, ನನ್ನ ಗಂಡ ಮತ್ತು 1ನೇ ಪ್ರತಿವಾದಿ ಬೇರೆ ಬೇರೆ ದಾವೆಗಳನ್ನು ನಡೆಸುತ್ತಿದ್ದೇವೆ ಎಂದರೆ ಗೊತ್ತಿಲ್ಲ. ಖರೀದಿದಾರರಿಗೆ ತೊಂದರೆ ಕೊಡಲು ಮತ್ತು ಅವರಿಂದ ಹಣ ಪಡೆಯುವ ಉದ್ದೇಶದಿಂದ ನಾವು ಮತ್ತು 1 ರಿಂದ 5ನೇ ಪ್ರತಿವಾದಿಗಳು ಶಾಮೀಲಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

44. ನಾನು ಲೇಔಟ್ ನಲ್ಲಿ ಖರೀದಿ ಮಾಡಿದ ಖರೀದಿದಾರರ ವಿರುದ್ದ ಮಾನ್ಯ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಒ ಎಸ್ ನಂ 263 ಎಂದು ಒಂದು ದಾವೆ ಹೂಡಿರುತ್ತೇನೆ ಎಂದರೆ ಬೇರೆ ಆಸ್ತಿಯ ಮೇಲೆ ಹೂಡಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂ 51/1 ಇ ನ್ನು ನನ್ನ ಗಂಡ, ನನ್ನ ಅತ್ತೆ ಮತ್ತು 1ನೇ ಪ್ರತಿವಾದಿ 1977ರ ಮೊದಲೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಖರೀದಿಯ ಪ್ರಕಾರ ಆ ಆಸ್ತಿಗಳು ಖರೀದಿದಾರರ ಹೆಸರಿನಲ್ಲಿದ್ದು ಈಗ 7 ಮತ್ತು 8ನೇ ಪ್ರತಿವಾದಿಗಳು ಆ ಆಸ್ತಿಗಳ

ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ 37 ಗುಂಟೆ ಜಮೀನಿನಲ್ಲಿ ನಿವೇಶನಗಳನ್ನು ಖರೀದಿ ಮಾಡಿದ ಖರೀದಿದಾರರ ಹೆಸರಿನಲ್ಲಿ ಆಯಾ ನಿವೇಶನಗಳು ಇವೆ ಎಂದರೆ ಸರಿಯಲ್ಲ. ಸರ್ವೆ ನಂ 51/1 ಇ ಈಗಾಗಲೇ ಮಾರಾಟವಾಗಿದ್ದರಿಂದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 51/1 ಇ ರಲ್ಲಿ ನಿವೇಶಗಳು ಮಾರಾಟವಾಗಿರುವ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**